(*b*) whether it has come to the notice of the Government that the Labour Officer of Mangalore Second Division is not working since one and half year;

(*c*) whether it is a fact that a post of Stenographer and two posts of Clerks have fallen vacant in the office of the Assistant Labour Commissioner, Mangalore;

(*d*) the measures taken by the Government to fill up these posts?

SRI A.B. JAKNUR.– (Minister for Labour).—

(*a*) Yes.

(*b*) Yes.

(*c*) Yes.

(*d*) Posts of Judges of Labour Court have been filled up. As per Government Order No. DPAR 19, SCR 82, dated 27th March 1982, selection of Clerks comes under the control of Public Service Commission, Bangalore, Government has constituted a Recruitment Committee to the appointment of Typists and Stenographers. Labour Department would take suitable action to fill up the posts of Stenographers and Typists.

ಶ್ರೀ ಕೆ. ರಾಮಭಟ್.—ಸ್ವಾಮಿ, ಜಡ್ಜರನ್ನು ನೇಮಕ ಮಾಡಿದ್ದೇವೆಂದು ಹೇಳಿದ್ದೀರಿ ಯಾವಾಗ ಮಾಡಿದಿರಿ; ಇಷ್ಟು ಸಮಯ ತೆಗೆದುಕೊಳ್ಳುವುದಕ್ಕೆ ಕಾರಣವೇನು?

ಶ್ರೀ ಎ.ಬಿ. ಜಕನೂರ್.– ಹೋದ ತಿಂಗಳು ನೇಮಕ ಮಾಡಿದ್ದೇವೆ.

ಶ್ರೀ ಕೆ. ರಾಮಭಟ್.—ಫಸ್ಟ್ ಡಿವಿಜನ್ ಮತ್ತು ಸೆಕೆಂಡ್ ಡಿವಿಜನ್ ಕ್ಲರ್ಕ್‌ಗಳ ಹುದ್ದೆಗಳು ಖಾಲಿ ಇವೆ ಎಂದು ಉತ್ತರ ಕೊಟ್ಟಿದ್ದೀರಿ, ಮತ್ತು ಇದು ಪಿ.ಎಸ್.ಸಿ. ಯವರ ವ್ಯಾಪ್ತಿಯಲ್ಲಿ ಬರುತ್ತದೆಂದು ಹೇಳಿದ್ದೀರಿ, ಅವರು ಯಾವಾಗ ಭರ್ತಿ ಮಾಡುತ್ತಾರೆ ಎಂಬ ಬಗ್ಗೆ ಏನಾದರೂ ಭರವಸೆ ಕೊಡುತ್ತೀರಾ?

ಶ್ರೀ ಎ.ಬಿ. ಜಕನೂರ್.—ಈ ಹುದ್ದೆಗಳನ್ನು ಪಿ ಎಸ್.ಸಿ. ಯವರು ನೇಮಕ ಮಾಡುತ್ತಾರೆ, ಮತ್ತೆ ತಮಗೇ ಗೊತ್ತಿರುವ ಹಾಗೆ ೪೦ ಸಾವಿರ ಹುದ್ದೆಗಳು ಏನು ಖಾಲಿ ಇವೆ, ಅವುಗಳನ್ನು ಆಗಸ್ಟ್ ೧೫ ರೊಳಗೆ ಭರ್ತಿ ಮಾಡಬೇಕೆಂದು ಈಗಾಗಲೇ ಮಾನ್ಯ ಫೈನಾನ್ಸ್ ಮಿನಿಸ್ಟರ್‌ರವರು ಸಹ ಹೇಳಿದ್ದಾರೆ. ಇನ್ನು ಶೇಫ್ಲರ್‌ಗಳಿಗಾರರ ಮತ್ತು ಟೈಪಿಸ್ಟ್ ಪೋಸ್ಟ್‌ಗಳನ್ನು ಭರ್ತಿ ಮಾಡುವ ಬಗ್ಗೆ ಸ್ಟೇಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡಿದ್ದೇವೆ. ಅವರು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ. ಮತ್ತೆ ಆಲ್ಲಿರುವ ಲೇಬರ್ ಆಫೀಸರನ್ನು ಸೇವೆಯಿಂದ ನಿವೃತ್ತಿ ಮಾಡಲಾಗಿದೆ. ಅವರ ಜಾಗದಲ್ಲಿ ಮತ್ತೊಬ್ಬ ಲೇಬರ್ ಆಫೀಸರನ್ನು ಪೋಸ್ಟ್ ಮಾಡಲಾಗಿದೆ.

Construction of Football Stadium at Bangalore

1043 SRI MICHAEL B.FERNANDES (Bharathinagar)–Will the Minister of State for Information and Youth Services be p'eased to state.—

(*a*) the year in which the State Government gave a grant of Rs 20 lakhs and a loan Rs. 35 lakhs to the Karnataka State Football Association for constructing its stadium in Bangalore;

(*b*) the estimated cost of constructing the stadium against which the grant and the loans were sanctioned;

(*c*) the amount spent by the Association so far on the construction work, and the amount still required to complete the work according to the original plan;

(*d*) whether the Government is contemplating the holding of an enquiry into the causes behind the non-completion of the construction work; if not why?

SRI K. GANGADHAR.(Minister of State for Information and Youth Services)—

(*a*) Grants amounting to Rs. 20 lakhs were given during 1970, 1972, 1973 and 1974; loans of Rs. 35 lakhs were given during the years 1975, 1976 and 1978.

(*b*) The estimated cost of constructing the Football Stadium was Rs. 165 lakhs as on 30-1-1976 against which the grants and loans were sanctioned. The Karnataka State Football Association has estimated that an amount of Rs. 2.5 crores would be required for completion of the balance work in all respects.

(*c*) The amount spent by the Association so far is Rs. 62.46 lakhs. The amount still required is Rs. 2.5 crores for completion of the stadium as per the revised estimate.

(*d*) No.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ನನ್ನ ಪ್ರಶ್ನೆ (ಈ) ಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ, ಅದಕ್ಕೆ ಕಾರಣಗಳೇನೆಂಬುದನ್ನು ತಿಳಿಸುತ್ತೀರಾ?

ಶ್ರೀ ಕೆ. ಗಂಗಾಧರ್.—ನಾವು ಕೊಟ್ಟಂಥ ಹಣವನ್ನು ಅಸೋಸಿಯೇಷನ್ನಿನವರು ಖರ್ಚು ಮಾಡಿದ್ದಾರೆ. ಅದಕ್ಕೆ ಸಾಕ್ಷಿಯಾಗಿ ಕಟ್ಟಡವಿದೆ. ಆದುದರಿಂದ ಇದರ ಬಗ್ಗೆ ತನಿಖೆ ನಡೆಸುವುದಕ್ಕೆ ಅಗತ್ಯ ಬರುವುದಿಲ್ಲ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ರಾಜ್ಯ ಸರ್ಕಾರದವರು ಕೊಟ್ಟಿರತಕ್ಕ ಅನುದಾನ ಮತ್ತು ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕ ಅನುದಾನ ಎಲ್ಲಾ ಸೇರಿಸಿದರೆ ಒಟ್ಟು ೬೩ ಲಕ್ಷ ರೂಪಾಯಿಂಗಳಾಗುತ್ತದೆ. ಅವರು ಖರ್ಚು ಮಾಡಿರತಕ್ಕದ್ದು ೬೨ ಲಕ್ಷದ ೬೭ ಸಾವಿರ ರೂಪಾಯಿಗಳು. ಆದರೆ ಈಗ ಅಲ್ಲಿ ಅರ್ಧವಾಗಿ ನಿಂತಿರತಕ್ಕ ಕಟ್ಟಡಕ್ಕೆ ಇನ್ನೂ ೨೫ ಕೋಟಿ ರೂಪಾಯಿಗಳು ಬೇಕೆಂದು ಹೇಳುತ್ತಿದ್ದಾರೆ; ಆದುದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳವರು ಏನು ಹೇಳುತ್ತಾರೆ?

ಶ್ರೀ ಕೆ. ಗಂಗಾಧರ್.—ಅಧ್ಯಕ್ಷರೇ, ಒಟ್ಟು ೬೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ; ಇನ್ನೂ ಕೂಡ ಎರಡೂವರೆ ಕೋಟಿ ರೂಪಾಯಿ ಗಳು ಬೇಕಾಗುತ್ತದೆ. ಇದನ್ನು ಮುಗಿಸಬೇಕಾಗಿದ್ದರೆ ಅಸೋಸಿಯೇಷನ್ನಿನವರಲ್ಲಿ ದುಡ್ಡಿಲ್ಲ; ಅದಕ್ಕೆ ನಾನು ಉನ್ನತ ಮಟ್ಟದ ಸಮಿತಿಯ ಸಭೆಯನ್ನು ಕರೆದಿದ್ದೆ. ಆದರಲ್ಲಿ ಇದರ ಬಗ್ಗೆ ನಾವು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲ. ಆದುದರಿಂದ ಇದನ್ನು ಸರ್ಕಾರದವರೇ ತೆಗೆದುಕೊಂಡು ಮುಗಿಸಬೇಕೇ ಅಥವಾ ಅಸೋಸಿಯೇಷನ್ನಿನವರೇ ಮುಗಿಸುವುದಕ್ಕೆ ಸಾಧ್ಯವೇ ಎಂಬುವ ಪ್ರಶ್ನೆ ಇದೆ. ಆದುದರಿಂದ ಈ ಸಮಸ್ಯೆಯನ್ನು ಇನ್ನೂ ಬಿಡಿಸುವುದಕ್ಕೆ ಸಾಧ್ಯವಾಗಿಲ್ಲ. ಆದುದರಿಂದ ಇದರ ಬಗ್ಗೆ ಆದಷ್ಟು ಬೇಗ ಮುಂದೆ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಫುಟ್‌ಬಾಲ್ ಸ್ಟೇಡಿಯಂ ಕಟ್ಟುವ ವಿಚಾರದಲ್ಲಿ ಆಡಿಟ್ ವರದಿ ಬಂದಿದೆ. ಅವರು ಇದರಲ್ಲಿ ಅವ್ಯವಹಾರವಾಗಿದೆಂದು ಹೇಳಿದ್ದಾರೆ; ಮಾನ್ಯ ಶ್ರೀ ದೇವರಾಜ್ ಅರಸ್ ರವರು ಇದರ ಬಗ್ಗೆ ತನಿಖೆ ನಡೆಸುವುದಾಗಿ ಹೇಳಿದ್ದರು, ಆದುದರಿಂದ ಆ ರೀತಿ ಏನಾದರೂ ತನಿಖೆ ಮಾಡಿಸಿದ್ದೀರಾ? ಹಾಗಿದ್ದರೆ ಮುಂದಿನ ಕ್ರಮ ಏನು ತೆಗೆದುಕೊಳ್ಳುತ್ತೀರಿ?

ಶ್ರೀ ಕೆ. ಗಂಗಾಧರ್.—ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಬೇಕಾಗುವಂಥಾ ಕಾಗದ ಪತ್ರಗಳನ್ನು ಕೊಟ್ಟಿದ್ದೇವೆ. ಲೆಕ್ಕ ಪತ್ರ ಸಮಿತಿಯವರು ಕೂಡ ನಮಗೆ ಈ ರೀತಿಯಾಗಿ ಅವ್ಯವಹಾರವಾಗಿದೆಯೆಂದು ತಿಳಿಸಿಲ್ಲ. ಅವ್ಯವಹಾರ ಏನಾದರೂ ನಡೆದಿದೆಯೆಂದು ಮಾನ್ಯ ಸದಸ್ಯರು ತಿಳಿಸಿದರೆ,ಅದಕ್ಕೆ ಬೇಕಾದಂಥಾ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

ST. JOHN SINCLAIR MARLEY.—Mr. Speaker Sir, in answer to 'c' it is stated that the amount required is Rs. 2.5 crores and in answer to question 'd' it is said 'No.' Why have the Government no say whatever when such a large sum of money is involved and nobody is there to question as to what has happend to the money ?

ಶ್ರೀ ಕೆ. ಗಂಗಾಧರ್.—ಈಗ ನಾವು ಖರ್ಚು ಮಾಡಿದಂಥ ಹಣಕ್ಕೆ ತಕ್ಕಂತೆ ಕಟ್ಟಡ ಮತ್ತು ಸ್ಟೇಡಿಯಂ ಆಲ್ಲಿ ನಿರ್ಮಾಣ ಆಗಿದೆ. ಕೆಲಸ ನಿಧಾನವಾದರೆ ವರ್ಷಂ ಪ್ರತಿ ಎಸ್ಟಿಮೇಟ್ ಕಾಸ್ಟ್, ಜಾಸ್ತಿ ಯಾಗುತ್ತಾ ಹೋಗುತ್ತದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—೬೨ ಲಕ್ಷ ರೂಪಾಯಿಗಳನ್ನು ಸಂಘದವರು ಖರ್ಚು ಮಾಡಿದ್ದಾರೆ, ಇನ್ನೂ ಎರಡೂವರೆ ಕೋಟಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆಂದು ಹೇಳಿದ್ದೀರಿ, ಇದನ್ನು ಕಂಪ್ಲೀಟ್ ಮಾಡಲಿಕ್ಕೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ? ಇದಕ್ಕೆ ಅಸೋಸಿಯೇಷನ್ ಅವರು ಜವಾಬ್ದಾರರಾಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಂಡು ಇದನ್ನು ಕಂಪ್ಲೀಟ್ ಮಾಡುತ್ತೀರಾ ?

ಶ್ರೀ ಕೆ. ಗಂಗಾಧರ್.—ಇದರ ಜವಾಬ್ದಾರಿಯನ್ನು ಕಾರ್ಪೊರೇಷನ್‌ನವರು ಅಸೋಸಿಯೇಷನ್‌ನವರಿಗೆ ೯೯ ವರ್ಷಗಳ ಲೀಸ್‌ಗೆ ಕೊಟ್ಟಿದ್ದಾರೆ. ಸರ್ಕಾರದವರು ತೆಗೆದುಕೊಳ್ಳಬೇಕೆಂದರೆ ಕೆಲವು ಕಾನೂನು ತೊಡಕು ಇದೆ, ಲಾ ಡಿಪಾರ್ಟ್‌ಮೆಂಟ್ ಜೊತೆ ಚರ್ಚೆ ಮಾಡುತ್ತಿದ್ದೇವೆ. ನನ್ನ ಉನ್ನತಮಟ್ಟದ ಸಮಿತಿಯನ್ನು ಕರೆದಿದ್ದೆ. ಅಸೋಸಿಯೇಷನ್‌ನವರು ಇದನ್ನು ಕಂಪ್ಲೀಟ್ ಮಾಡಲಿಕ್ಕೆ ಕಷ್ಟವಾಗುತ್ತದೆ ಅವರು ಎರಡೂವರೆ ಕೋಟಿ ರೂಪಾಯಿ ಖರ್ಚು ಮಾಡಲಿಕ್ಕೆ ಸಾಧ್ಯವಿಲ್ಲ, ಆದ್ದರಿಂದ ಸರ್ಕಾರದವರೇ ಮುಂದೆ ನಿಂತು ಕೆಲಸ ಮಾಡಬೇಕಾಗುತ್ತದೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ನಾನು ನನ್ನ ಪ್ರಶ್ನೆಯಲ್ಲಿ ಕ್ರೀಡಾಂಗಣದ ನಿರ್ಮಾಣದ ಅಂದಾಜು ವೆಚ್ಚವೆಷ್ಟು ಎಂದು ಕೇಳಿದ್ದಕ್ಕೆ ೧೯೭೬ ರಂದು ಇದ್ದ ರೀತ್ಯ ಫುಟ್‌ಬಾಲ್ ಕ್ರೀಡಾಂಗಣ ನಿರ್ಮಿಸಲು ಮಂಜೂರು ಮಾಡಿದ ಅನುದಾನ ಹಾಗೂ ಸಾಲಗಳಲ್ಲಿ ೧೬೫ ಲಕ್ಷ ಅಂಥ ಹೇಳಿದ್ದೀರಿ ಪ್ರಾರಂಭದಲ್ಲಿ ಇಷ್ಟು ಹಣ ಕೊಡಬೇಕಾಗಿದ್ದರೆ ಯಾವ ಅಂದಾಜಿನ ಮೇಲೆ ಕೊಡಲಾಗಿತ್ತು ? ಪ್ರಾರಂಭದಲ್ಲಿ ಎಷ್ಟು ಅಂದಾಜು ವೆಚ್ಚ ಇತ್ತು ?

ಶ್ರೀ ಕೆ. ಗಂಗಾಧರ್.—ಪ್ರಾರಂಭದಲ್ಲಿ ೪೮ ಲಕ್ಷ ರೂಪಾಯಿ ಅಂದಾಜು ವೆಚ್ಚ ಇತ್ತು, ಅನಂತರ ವರ್ಷಂಪ್ರತಿ ರೇಟು ಜಾಸ್ತಿಯಾದುದರಿಂದ ಈ ಹಣದಲ್ಲಿ ಸ್ಟೇಡಿಯಂ ಕಟ್ಟಲಿಕ್ಕೆ ಸಾಧ್ಯವಾಗಿಲ್ಲ.

SRI C.M. ARUMUGHAM.—May I know what is the annual income of this Association ?

ಶ್ರೀ ಕೆ ಗಂಗಾಧರ್.—ಫುಟ್‌ಬಾಲ್ ಆಟ ಹೆಚ್ಚು ಹಣ ತಂದುಕೊಡುವ ಆಟವಲ್ಲ. ಕ್ರಿಕೇಟ್ ಆದರೆ ಹೆಚ್ಚು ಹಣ ಸಂಗ್ರಹ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಈ ಆಟದಿಂದ ಇನ್‌ಕಂ ಎಷ್ಟು ಬರುತ್ತದೆ ಎನ್ನುವ ಬಗ್ಗೆ ಲೆಕ್ಕಪತ್ರ ಇಲ್ಲ.

MR. SPEAKER.—The hon Minister has no information.

SRI C.M. ARUMUGHAM.—If they had got income, they would have completed the work. It is not necessary that this Association should complete the stadium. Football is a popular game. The Asian games are organised by the Government of India. Actually it should have been done by the Olympic Association. They are not doing it. So the Government of India are doing it. Since football is a popular game and the Association is not in a position to complete this stadium, will the Government and the Corporation jointly complete it by taking over Construction in the interest of the youth ?

SRI K. GANGADHAR.—The Government will take over the Stadium and we will complete it.

Filling up of Doctors in E.S.I. Hospital

1064. SRI PAMPAPATHI (Davanagere).—Will the Minister for Labour be pleased to state.—

(a) the number of E.S.I. hospitals in Davangere Town ;

(b) out of them, the number of Doctors and other staff who are working in these hospitals ;

(c) the number of vacant posts of Doctors and since when they are vacant ;

(d) whether any proposal is under consideration of the Government to fill up these posts ;

SRI A. B. JAKANUR, (Minister for Labour) –

(a) In addition to the construction of three dispensaries it has been proposed to construct one 50 beds hospital. 5 Acres and 28 Guntas of land has been acquired for this purpose. Plans and estimates for the construction of building are awaited from the Public Works Department.

(b) Doctors ... 12

Other Staff ... 45

(c) All the posts have been filled up.

(d) Government is considering to fill up the other posts which are vacant.

ಶ್ರೀ ಪಂಪಾಪತಿ.—ದಾವಣಗೆರೆ ನಗರದಲ್ಲಿರುವ ಒಟ್ಟು ಇ.ಎಸ್.ಐ. ಆಸ್ಪತ್ರೆಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಮೂರು ಚಿಕಿತ್ಸಾಲಯಗಳು ಇದಲ್ಲದೆ ಇದರ ಜೊತೆಗೆ ೫೦ ಹಾಸಿಗೆಗಳ ಒಂದು ಆಸ್ಪತ್ರೆಯನ್ನು ಕಟ್ಟಲು ಯೋಚಿಸಲಾಗಿದೆ. ಇದಕ್ಕಾಗಿ ೫ ಎಕರೆ ೨೮ ಗುಂಟೆ ಜಮೀನನ್ನು ಸ್ವಾಧೀನ ಪಡೆದುಕೊಂಡಿದೆ, ಕಟ್ಟಡವನ್ನು ಕಟ್ಟಲು ಲೋಕೋಪಯೋಗಿ ಇಲಾಖೆಯವರಿಂದ ನಕಾಶೆ ಮತ್ತು ಅಂದಾಜು ವೆಚ್ಚವನ್ನು ನಿರೀಕ್ಷಿಸಲಾಗಿದೆ ಎಂದು ಹೇಳಿದ್ದಾರೆ. ೫೦ ಹಾಸಿಗೆಗಳ ಒಂದು ಆಸ್ಪತ್ರೆಯ ಯೋಜನೆ ವರ್ಷದಿಂದ ಇದೆ ? ೫ ಎಕರೆ ೨೮ ಗುಂಟೆ ಜಮೀನು ಸ್ವಾಧೀನಪಡಿಸಿಕೊಂಡು